
# ಕಥೋಪದೇಶ

## ಪ್ರೀತಿಯಿಂದ ಪ್ರೀತಿ

**ರಾಜು** ಎಂಬ ವ್ಯಕ್ತಿಯಿದ್ದ. ಅವನಿಗೆ ಎಲ್ಲ ಅನುಕೂಲಗಳಿದ್ದವು. ಮನೆಯಲ್ಲಿ ಯಾವ ತೊಂದರೆ ತಾಪತ್ರಯಗಳೂ ಇರಲಿಲ್ಲ. ಆದರೂ ಅವನಿಗೆ ನೆಮ್ಮದಿ ಇಲ್ಲ. ನನ್ನನ್ನು ಯಾರೂ ಪ್ರೀತಿಸುವುದಿಲ್ಲ, ಗೌರವಿಸುವುದಿಲ್ಲ, ನನ್ನನ್ನು ಯಾರೂ ಕೇಳುವವರೆ ಇಲ್ಲ — ಎಂದೆಲ್ಲ ಆಲೋಚಿಸುತ್ತಿದ್ದ. ಹೀಗೆ ಎಲ್ಲರೊಡನಿದ್ದೂ ಒಂಟಿತನವನ್ನು ಅನುಭವಿಸುತ್ತಿದ್ದ. ಅವನು ಒಬ್ಬ ಸಾಧುವಿನ ಹತ್ತಿರ ಹೋಗಿ ತನ್ನ ಕಷ್ಟವನ್ನು ಹೇಳಿಕೊಂಡ. ಸಾಧುವು ತಾಳ್ಮೆಯಿಂದ ಅವನ ದುಃಖದ ವಿಷಯವನ್ನು ಕೇಳಿ ಅರ್ಥ ಮಾಡಿಕೊಂಡನು. ಅನಂತರ ಅವನಿಗೆ ಹೇಳಿದನು: 'ನೀನು ಅತ್ಯಂತವಾಗಿ ಪ್ರೀತಿಸುವ ಒಬ್ಬ ವ್ಯಕ್ತಿಯನ್ನು ಇಲ್ಲಿಗೆ ಕರೆದುಕೊಂಡು ಬಾ' ಎಂದು.

ಅವನು ಆಗಲಿ ಎಂದು ಮನೆಗೆ ಹಿಂದಿರುಗಿದ. ತಾನು ಅತ್ಯಂತವಾಗಿ ಪ್ರೀತಿಸುವ ವ್ಯಕ್ತಿ ಯಾರು ಎಂದು ಆಳವಾಗಿ ಆಲೋಚಿಸತೊಡಗಿದ. ಮೊದಲು ತನ್ನ ತಂದೆ ತಾಯಿಗಳ ಬಗ್ಗೆ ಆಲೋಚಿಸಿದ, ತನ್ನ ಪತ್ನಿಯ ಬಗ್ಗೆ ಆಲೋಚಿಸಿದ, ತನ್ನ ಪುತ್ರರ ಬಗ್ಗೆ ಆಲೋಚಿಸಿದ, ತನ್ನ ಸ್ನೇಹಿತರು ಬಂಧು ಬಾಂಧವರ ಬಗ್ಗೆ ಆಲೋಚಿಸಿದ. ಅವರಾರನ್ನೂ ತಾನು ನಿಜವಾಗಿ ಪ್ರೀತಿಸುತ್ತಿರುವಂತೆ ಅವನಿಗೆ ಅನಿಸಲಿಲ್ಲ. ಯಾವಾಗಲೂ ತನ್ನ ಬಗ್ಗೆಯೇ ತಾನು ಚಿಂತಿಸುತ್ತಿರುವುದಾಗಿ ಅವನಿಗೆ ಅನಿಸಿತು.

ಮರುದಿನ ಮತ್ತೆ ಸಾಧುವಿನ ಹತ್ತಿರ ಹೋದ. 'ಏನು ಒಬ್ಬನೇ ಬರುತ್ತಿರುವೆಯಲ್ಲ?' ಎಂದು ಸಾಧು ಅವನನ್ನು ಪ್ರಶ್ನಿಸಿದ. ಅವನು ಮಾತನಾಡದೆ ತಲೆ ತಗ್ಗಿಸಿಕೊಂಡು ನಿಂತುಬಿಟ್ಟನು. ಸಾಧುವಿಗೆ ಅವನ ಸ್ಥಿತಿ ಅರ್ಥವಾಯಿತು. ಅವನನ್ನು ಕುರಿತು ಹೀಗೆಂದನು:'ನೀನು ಯಾರನ್ನೂ ಪ್ರೀತಿಸದೆ ಇತರರ ಪ್ರೀತಿಯನ್ನು ನಿರೀಕ್ಷಿಸುವುದಕ್ಕೆ ನಿನಗೆ ಯಾವ ಹಕ್ಕಿದೆ? ನೀನು ಯಾವ ಭಾವವನ್ನು ಹೊರಪಡಿಸುತ್ತೀಯೋ ಅದೇ ಭಾವವೇ ಪ್ರತಿಫಲಿತವಾಗಿ ನಿನಗೆ ಬರುತ್ತದೆ. ನೀನು ದ್ವೇಷ ಭಾವವನ್ನು ವ್ಯಕ್ತಪಡಿಸಿದರೆ ಎಲ್ಲರೂ ನಿನ್ನನ್ನು ದ್ವೇಷಿಸುತ್ತಿರುವಂತೆ ಅನಿಸುತ್ತದೆ. ಪ್ರೀತಿಯನ್ನು ವ್ಯಕ್ತಪಡಿಸಿದರೆ ಎಲ್ಲರೂ ನಿನ್ನನ್ನು ಪ್ರೀತಿಸುವಂತಾಗುತ್ತದೆ. ನಿನ್ನನ್ನು ನೀನು ಇತರರಲ್ಲಿ ಕಂಡುಕೊಳ್ಳುವಂತಾದರೆ ಆಗ ಎಲ್ಲರೂ ನಿನಗೆ ಪ್ರಿಯರಾಗುತ್ತಾರೆ —ಎಲ್ಲರೂ ನಿನ್ನವರಾಗುತ್ತಾರೆ. ಆಗ ನಿನಗೆ ಒಂಟಿತನದ ವೇದನೆ ಉಂಟಾಗುವುದಿಲ್ಲ. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:


ಕಲೆ: ರಾಮಗೌತಮ

ಅಯಂ ನಿಜಃ ಪರೋ ವೇತಿ
ಗಣನಾ ಲಘುಚೇತಸಾಮ್।
ಉದಾರಚರಿತಾನಾಂ ತು
ವಸುಧೈವ ಕುಟುಂಬಕಮ್ ॥

'ಇವನು ನನ್ನವನು, ಅವನು ಇತರರವನು ಎಂದು ಕ್ಷುದ್ರಮನಸ್ಸಿನವರು ಪರಿಗಣಿಸುತ್ತಾರೆ. ಆದರೆ ಉದಾರ ಮನಸ್ಸಿನವರಿಗೆ ಇಡೀ ಭೂಮಂಡಲವೇ ಕುಟುಂಬವಾಗುತ್ತದೆ.'

# ಪ್ರಾಮಾಣಿಕತೆ



**ಕರುಣಾಕರ**ನೆಂಬುವವನು ತುಂಬ ಉದಾರಿ. ಅವನು ಅಷ್ಟೇನೂ ಶ್ರೀಮಂತನಲ್ಲದಿದ್ದರೂ ತುಂಬ ದಾನಧರ್ಮ ಮಾಡುತ್ತಿದ್ದ, ಕಷ್ಟದಲ್ಲಿರುವವರಿಗೆ ತನಗಾದ ಎಲ್ಲ ರೀತಿಯ ಸಹಾಯ ಮಾಡುತ್ತಿದ್ದ. ಅನೇಕ ಸ್ವಾರ್ಥಿಗಳು ಅವನ ಔದಾರ್ಯದ ಪ್ರಯೋಜನವನ್ನು ಪಡೆಯುತ್ತಿದ್ದರು. ಅವನಿಂದ ಹಣವನ್ನು ಪಡೆದುಕೊಂಡು ಹಿಂತಿರುಗಿ ಕೊಡುತ್ತಲೇ ಇರಲಿಲ್ಲ. ಅವನಿಂದ ಎಷ್ಟೇ ಸಹಾಯವನ್ನು ಪಡೆದರೂ ಪ್ರತಿಯಾಗಿ ಅವನಿಗೆ ಏನೂ ಸಹಾಯ ಮಾಡುತ್ತಿರಲಿಲ್ಲ. ಆದರೆ ಕರುಣಾಕರನು ಇದಾವುದನ್ನೂ ಲೆಕ್ಕಿಸುತ್ತಿರಲಿಲ್ಲ. ಪ್ರತಿಫಲವನ್ನು ನಿರೀಕ್ಷಿಸದೆ ಇತರರಿಗೆ ಸಹಾಯ ಮಾಡುವುದೊಂದೆ ಅವನ ಸ್ವಭಾವವಾಗಿತ್ತು.

ಈ ಪ್ರಪಂಚದಲ್ಲಿ ಕಷ್ಟವಿಪತ್ತುಗಳು ಎಲ್ಲರಿಗೂ ಬರುತ್ತವೆ. ಅವಕ್ಕೆ ಕೆಟ್ಟವರು ಒಳ್ಳೆಯವರು ಎಂಬ ಭೇದವಿಲ್ಲ. ಕರುಣಾಕರನಿಗೂ ಕಷ್ಟಕಾಲ ಬಂದೊದಗಿತು. ಕ್ರಮೇಣ ಅವನಿಗೆ ಬಡತನ ಪ್ರಾಪ್ತವಾಯಿತು. ಒಂದು ದಿನ ಒಂದು ದುರ್ಘಟನೆ ಸಂಭವಿಸಿತು. ಆಕಸ್ಮಿಕವಾಗಿ ಅವನ ಮನೆಗೆ ಬೆಂಕಿ ಬಿತ್ತು. ಅವನ ಪತ್ನಿ ಪುತ್ರರೆಲ್ಲ ಬೆಂಕಿಯಿಂದ ಪಾರಾದರು. ಆದರೆ ಮನೆಯು ಮಾತ್ರ ಸುಟ್ಟು ಭಸ್ಮವಾಯಿತು. ಊರಿನವರೆಲ್ಲ 'ಅಯ್ಯೋ ಪಾಪ' ಎಂದರೇ ಹೊರತು ಅವನ ಸಹಾಯಕ್ಕೆ ಯಾರೂ ಬರಲಿಲ್ಲ. ಇತರರ ಸಹಾಯವನ್ನು ಕೋರುವುದಕ್ಕೆ ಅವನ ಸ್ವಾಭಿಮಾನ ಒಪ್ಪಲಿಲ್ಲ. ಸುಟ್ಟು ಉಳಿದ ಮನೆಯ ಒಂದು ಸಣ್ಣ ಭಾಗವನ್ನೇ ಆಸರೆಯನ್ನಾಗಿ ಮಾಡಿಕೊಂಡು ಅವನು ಸಂಸಾರವನ್ನು ಮುಂದುವರಿಸಿದನು.

ಹೊಸಮನೆ ಕಟ್ಟಿಸುವುದಕ್ಕೆ ಅವನಲ್ಲಿ ಹಣವಿರಲಿಲ್ಲ. ಸ್ವಂತ ಪರಿಶ್ರಮದಿಂದ ಒಂದು ಗುಡಿಸಲನ್ನು ಕಟ್ಟುವುದೆಂದು ಅವನು ನಿರ್ಧರಿಸಿದ. ಅದಕ್ಕಾಗಿ ಮಣ್ಣನ್ನು ಅಗೆಯುತ್ತಿರುವಾಗ ಅವನಿಗೊಂದು ತಾಮ್ರದ ಬಿಂದಿಗೆ ಸಿಕ್ಕಿತು. ಅದನ್ನು ತೆಗೆದು ನೋಡಿದಾಗ ಅದರ ತುಂಬ ಹಣವಿತ್ತು. ಪತ್ನಿಪುತ್ರರಿಗೆಲ್ಲ ತುಂಬ ಸಂತೋಷವಾಯಿತು. ಭಗವಂತನೆ ಆ ಹಣವನ್ನು ಕರುಣಿಸಿದ್ದಾನೆಂದು ಅವರು ಭಾವಿಸಿದರು. ಆದರೆ ಕರುಣಾಕರನ ಆಲೋಚನೆಯೇ ಬೇರೆ. ಅದು ತಾನು ದುಡಿದು ಸಂಪಾದಿಸಿದ ಹಣವಲ್ಲ, ಆಕಸ್ಮಿಕವಾಗಿ ಸಿಕ್ಕಿದುದಾದ್ದರಿಂದ ಅದು ಸರ್ಕಾರಕ್ಕೆ ಸಲ್ಲಬೇಕಾದ್ದು ಎಂದು ಚಿಂತಿಸಿದನು.

ಕರುಣಾಕರನು ಆ ಹಣದ ಬಿಂದಿಗೆಯನ್ನು ತೆಗೆದುಕೊಂಡು ಆ ಊರಿನ ಸರ್ಕಾರಿ ಅಧಿಕಾರಿಯ ಹತ್ತಿರ ಹೋದನು. ಅಧಿಕಾರಿಯು ಇವನ ಪ್ರಾಮಾಣಿಕತೆಯನ್ನು ಕಂಡು ಅಚ್ಚರಿಪಟ್ಟನು. 'ಆ ಹಣವನ್ನು ನೀನೇ ಉಪಯೋಗಿಸು' ಎಂದು ಕರುಣಾಕರನಿಗೆ ಹೇಳಿದನು. ಕರುಣಾಕರನು ನಿರಾಕರಿಸಿ ಆ ಹಣವನ್ನು ಅಲ್ಲಿಯೇ ಬಿಟ್ಟು ಹೊರಟುಹೋದನು.

ಮರುದಿನ ಆ ಹಣದ ಬಿಂದಿಗೆ ಮತ್ತೆ ಅವನ ಮನೆಗೆ ಬಂದಿತು. ಜಿಲ್ಲಾಧಿಕಾರಿಯು ಅದನ್ನು ಕಳಿಸಿದ್ದನು. ಕರುಣಾಕರನ ದುಃಸ್ಥಿತಿಯನ್ನು ಅರಿತು ಅವನಿಗದನ್ನು ಹಿಂದಿರುಗಿಸಿದ್ದನು. ಆದರೆ ಕರುಣಾಕರನು ಅದನ್ನು ಉಪಯೋಗಿಸದೆ ಆ ಊರಿನ ಬಡವರಿಗೆಲ್ಲ ಅದನ್ನು ಹಂಚಿಬಿಟ್ಟನು. ಇದನ್ನು ತಿಳಿದ ಜಿಲ್ಲಾಧಿಕಾರಿಯು ಅವನಿಗಾಗಿ ಒಂದು ಮನೆಯನ್ನು ಸರ್ಕಾರದ ವತಿಯಿಂದ ಕಟ್ಟಿಸಿಕೊಟ್ಟನು.

ಇಲ್ಲಿ ಈ ಕೆಳಗಿನ ಸಂಸ್ಕೃತ ಶ್ಲೋಕವನ್ನು ನೆನೆಪಿಸಿಕೊಳ್ಳಬಹುದು:

**ಸುವರ್ಣಪುಷ್ಪಾಂ ಪೃಥಿವೀಂ**
**ಚಿನ್ವಂತಿ ಪುರುಷಾಸ್ತ್ರಯಃ|**
**ಶೂರಶ್ಚ ಕೃತವಿದ್ಯಶ್ಚ ಯಶ್ಚ**
**ಜಾನಾತಿ ಸೇವಿತುಮ್||**

'ಮೂರು ಬಗೆಯ ವ್ಯಕ್ತಿಗಳು ಚಿನ್ನದಿಂದ ಶೋಭಿತವಾದ ಭೂಮಿಯನ್ನು ಹೊಂದುತ್ತಾರೆ. ಅವರಾರೆಂದರೆ : ಶೂರನು, ವಿದ್ಯಾವಂತನು ಮತ್ತು ಏನನ್ನೂ ನಿರೀಕ್ಷಿಸದೆ ಪರಸೇವೆಯನ್ನು ಮಾಡುವವನು.'